# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 04/2024**

**ದೋ.ಸಾ. : 01 ಫ್ರಾ.ಸಾ. : 03**

| | | |
|---|---|---|
| ಸಾಕ್ಷಿಯ ಹೆಸರು | : | ರಾಮದಾಸ ಮಹಾದೇವ ಶೆಟ್ಟಿ |
| ತಂದೆಯ ಹೆಸರು | : | ಮಹಾದೇವ ಶೆಟ್ಟಿ |
| ವಯಸ್ಸು | : | 50 ವರ್ಷ |
| ಕೆಲಸ | : | ಪಿಗ್ಮಿ ಕಲೆಕ್ಟರ್ |
| ವಾಸ | : | ತೆರ್ನಮಕ್ಕಿ, ಕಟಗೇರಿ, ತಾಃ ಭಟ್ಕಳ |

**ದಿನಾಂಕಃ 28-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ನಾನು ಹಾಗೂ ನನ್ನ ಕುಟುಂಬ ಭಟ್ಕಳ ತಾಲೂಕಿನ ಕಟಗೇರಿಯ ತೆರ್ನಮಕ್ಕಿಯಲ್ಲಿ ವಾಸವಾಗಿರುತ್ತೇವೆ. ನಾನು ವೃತ್ತಿಯಲ್ಲಿ ಭಟ್ಕಳ ಅರ್ಬನ್ ಬ್ಯಾಂಕ್ ನ ಪಿಗ್ಮಿ ಕಲೆಕ್ಟರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಹೆಸರಿನಲ್ಲಿ ಒಟ್ಟು ಏಳು ಮನೆಗಳು ಇದ್ದು, ಒಂದು ಮನೆಯಲ್ಲಿ ನಾನು ವಾಸವಿದ್ದು, ಉಳಿದ ಆರು ಮನೆಗಳನ್ನು ಬಾಡಿಗೆಗೆ ನೀಡಿರುತ್ತೇನೆ. ಸದರಿ ಬಾಡಿಗೆ ಮನೆಗಳು ನಾನು ವಾಸವಿರುವ ಮನೆಯ ಹಿಂಬದಿಯಲ್ಲಿರುತ್ತವೆ.

2. 2023 ನೇ ಇಸವಿಯಲ್ಲಿ ಸದರಿ ಆರು ಬಾಡಿಗೆ ಮನೆಗಳ ಪೈಕಿ ಮೂರು ಮನೆಗಳು ಖಾಲಿ ಇದ್ದವು. ಚಾಸಾ-16 ಚಂದ್ರಹಾಸ ರವರು ನನಗೆ ಪರಿಚಯ. ಈಗ ನ್ಯಾಯಾಲಯದ ವಿ.ಸಿ ಯಲ್ಲಿರುವ ಆರೋಪಿ ನನಗೆ ಗೊತ್ತು, ಆತನಿಗೆ ಚಾಸಾ-16 ರವರು ಬಾವನಾಗಬೇಕು. ದಿಃ14-10-2023 ರಂದು ಚಾಸಾ-16 ರವರು ಬಂದು, ತನ್ನ ಸಂಬಂಧಿಯಾದ ಆರೋಪಿಗಾಗಿ ಬಾಡಿಗೆ ಮನೆ ಕೇಳಿ, ರೂ. 5,000/- ಗಳನ್ನು ಮುಂಗಡವಾಗಿ ನೀಡಿರುತ್ತಾರೆ. ಆ ನಂತರ ನಾನು ಖಾಲಿ ಉಳಿದಿದ್ದ ಮೂರು ಮನೆಗಳ ಪೈಕಿ ಒಂದು ಮನೆಯನ್ನು ಆರೋಪಿಗೆ ಬಾಡಿಗೆಗೆ ನೀಡಿರುತ್ತೇನೆ. ಅದರಂತೆ ಸದರಿ ಮನೆಗೆ ದಿಃ 15-10-2023 ರಂದು ಆರೋಪಿ, ಆತನ ಹೆಂಡತಿ ನಂದಿನಿ ಹಾಗೂ ಆತನ ಎರಡು ಮಕ್ಕಳು ಸೇರಿ ಒಟ್ಟು 4-5 ಜನರು ಮನೆಗೆ

ಬಂದು ವಾಸವಾಗಿದ್ದರು. ಚಾಸಾ-13 ಸಾನಿತ್ಯಳು ಆರೋಪಿ ಹಾಗೂ ಮೃತೆ ನಂದಿನಿಯ ಮಗಳಿರುತ್ತಾಳೆ.

3. ದಿಃ 17-10-2023 ರಂದು ನಾನು ನನ್ನ ಕೆಲಸದ ಮೇಲೆ ಮುರ್ಡೇಶ್ವರಕ್ಕೆ ಹೋಗಿದ್ದು, ರಾತ್ರಿ 08-15 ಗಂಟೆಗೆ ಮನೆಗೆ ಬಂದಿರುತ್ತೇನೆ. ನಮ್ಮ ಮನೆಯ ಹಿಂದುಗಡೆ ಬಾಡಿಗೆ ಮನೆಯ ದಾರಿಯಲ್ಲಿ ನಂದಿನಿಯ ಶವ ಬಿದ್ದಿದ್ದು, ಆಕೆಯ ತಲೆಯ ಹಿಂಬಾಗದಿಂದ ರಕ್ತ ಬರುತ್ತಿದ್ದು, ಮೈ ಮೇಲೆ ನೈಟಿಯನ್ನು ಧರಿಸಿದ್ದರು. ಅಲ್ಲಿ ಶವ ಬಿದ್ದ ಸ್ಥಳಕ್ಕೆ ಅಕ್ಕ-ಪಕ್ಕದ ಮನೆಯ ಬಾಡಿಗೆದಾರರು ಸಹ ಬಂದಿದ್ದರು. ಆ ಸ್ಥಳದಲ್ಲಿ ನಾನು ಆರೋಪಿಯನ್ನು ನೋಡಿರುವುದಿಲ್ಲ. ಆ ನಂತರ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಾನು ಪೊಲೀಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಯು ತಾನು ನೀಡಿದ ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

4. ದೂರು ಕೊಟ್ಟ ನಂತರ ಪೊಲೀಸರು ಸ್ಥಳದಲ್ಲಿಯೇ ರಾತ್ರಿ 09-30 ರಿಂದ 11-00 ಗಂಟೆಯ ವರೆಗೆ ಬ್ಯಾಟರಿಯ ಬೆಳಕಿನಲ್ಲಿ ಮೃತೆ ನಂದಿನಿಯ ಶವ ಪಂಚನಾಮೆಯನ್ನು ಮಾಡಿದರು. ಆದರೆ ಶವದ ಮೈ ಮೇಲೆ ಇದ್ದ ಗಾಯಗಳನ್ನು ಹಾಗೂ ವಸ್ತುಗಳನ್ನು ನಾನು ನೋಡಿರುವುದಿಲ್ಲ ಹಾಗೂ ಪೊಲೀಸರು ಸ್ಥಳದಲ್ಲಿ ವಸ್ತುಗಳನ್ನು ಜಪ್ತುಪಡಿಸಿಕೊಂಡಿದ್ದನ್ನು ಸಹ ನಾನು ನೋಡಿರುವುದಿಲ್ಲ. ಸದರಿ ಶವ ಪಂಚನಾಮೆಗೆ ಚಾಸಾ-2 ನಾಗಪ್ಪ, ಚಾಸಾ-3 ಭಾಸ್ಕರ ಮತ್ತು ಚಾಸಾ-10 ಜಯಂತಿ ರವರು ಪಂಚರಾಗಿ ಹಾಜರಿದ್ದು, ನಾನು ಹಾಗೂ ಪಂಚರು ಸಹಿ ಮಾಡಿರುತ್ತೇವೆ. ಶವ ಪಂಚನಾಮೆಯ ಸಮಯದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿರುತ್ತಾರೆ. ಶವ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಶವ ಪಂಚನಾಮೆಯ ಸಮಯದಲ್ಲಿ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿರುತ್ತದೆ. ಸದರಿ ಫೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯ ಹಾಗೂ ಮೃತೆ ನಂದಿನಿಯ ಶವವನ್ನು ನೋಡಿ ಗುರುತಿಸಿರುತ್ತಾರೆ. ಶವ ಪಂಚನಾಮೆಯ ನಂತರ ಪೊಲೀಸರು ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ.

5. ಮರು ದಿನ ಪೊಲೀಸರು ಸ್ಥಳಕ್ಕೆ ಬಂದಿದ್ದು, ಅವರಿಗೆ ಅಕ್ಕ-ಪಕ್ಕದವರು ಆರೋಪಿ ವಾಸವಾಗಿದ್ದ ಮನೆಯನ್ನು ತೋರಿಸಿರುತ್ತಾರೆ. ಅಲ್ಲಿ ಪೊಲೀಸರು ಸ್ಥಳ ಪರಿಶೀಲಿಸಿ,

ಪಂಚನಾಮೆಯನ್ನು ಮಾಡಿ, ನನ್ನ ಸಹಿಯನ್ನು ಪಡೆದುಕೊಂಡರು ಹಾಗೂ ನಕಾಶೆಯನ್ನು ತಯಾರಿಸಿ, ಪೋಟೋವನ್ನು ತೆಗದಿರುತ್ತಾರೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆಯ ಸಮಯದಲ್ಲಿ ತೆಗೆದ ಪೋಟೋವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–9 ಎಂದು ಗುರುತಿಸಲಾಯಿತು. ನಿಪಿ–9 ಪೋಟೋದಲ್ಲಿ ಸಾಕ್ಷಿಯು ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ಪೋಟೋವನ್ನು ಆರೋಪಿ ವಾಸವಾಗಿದ್ದ ಮನೆಯ ಮುಂದಿನ ರಸ್ತೆಯಲ್ಲಿ ತೆಗೆದ ಪೋಟೋ ಎಂದು ನುಡಿದಿರುತ್ತಾರೆ.

6. ಆ ನಂತರ ಅಕ್ಟೋಬರ್ ತಿಂಗಳಲ್ಲಿಯೇ ನಾನು ಭಟ್ಕಳ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಘಟನೆಯ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ– 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ– 10(ಎ) ಮತ್ತು ನಿಪಿ– 10(ಬಿ) ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ